ಊ) -- ಹೌದು --

ಊ) ಮೆ: ಭಂಡಾರಿ ಬಿಲ್ಡರ್ಸ್(ಪೈ) ಲಿಮಿಟೆಡ್, ರಹೆಜಾ ಚೇಂಬರ್ಸ್ ಮ್ಯೂಸಿಯಂ.

ವಿಷಯ:- ಮಕ್ಕಳ ಪುಸ್ತಕಗಳ ಹೊರೆ ಇಳಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 273(64)

ಶ್ರೀ ಆರ್.ಕೃಷ್ಣಪ್ಪ (ಜಯಮಹಲ್) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಕ್ಕಳು ಪ್ರತಿ ದಿನ ಶಾಲೆಗೆ ತೆಗೆದುಕೊಂಡು ಹೋಗತಕ್ಕ ಪುಸ್ತಕಗಳ ಹೊರೆ ಇಳಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಪರಿಶೀಲಿಸಲಾಗಿದೆ.

ಆ) ಪಠ್ಯ ಪುಸ್ತಕಗಳ ಸಂಖ್ಯೆ ಕಡಿಮೆ ಮಾಡಲು ಪುಟ ಸಂಖ್ಯೆ ಮಿತಿಗೊಳಿಸುವುದು, ಕಲಿಸುವ ವಿಷಯ ಹಾಗೂ ಮನೆ ಪಾಠವನ್ನು ಸಹ ಮಕ್ಕಳಿಗೆ ಹೊರೆಯಾಗದಂತೆ ಶಿಕ್ಷಕರಿಗೆ ಸರಿಯಾದ ಮಾರ್ಗದರ್ಶನ ನೀಡುವುದು, ಎಲ್ಲಾ ಶಿಕ್ಷಕರಿಗೆ ಕಾಲಕಾಲಕ್ಕೆ ಸೇವಾ ನಿರತ ತರಬೇತಿ ನೀಡುವುದು ಸೇರಿದೆ. ಈ ಬಗ್ಗೆ ದಿನಾಂಕ: 20-2-1993 ಮತ್ತು ದಿನಾಂಕ:28-5-1994ರಲ್ಲಿ ಎಲ್ಲಾ ಉಪ ನಿರ್ದೇಶಕರಿಗೆ ಸುತ್ತೋಲೆ ಹೊರಡಿಸಿ ಪುಸ್ತಕದ ಹೊರೆ ಕಡಿಮೆ ಮಾಡಲು ವಿವಿಧ ಕ್ರಮ ಕೈಗೊಳ್ಳಲು ತಿಳಿಸಿದೆ.

ವಿಷಯ:- ಬಿ.ಎಂ.ಎಸ್.ಹುಳಿಯಾರು ಕಾಲೇಜಿನ ಕಟ್ಟಡ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 274(398)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಳಿಯಾರಿನ ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ದಾನಿಗಳಿಂದ ಸಾಕಷ್ಟು ಜಮೀನು ದಾನ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸ್ವಂತ ಕಟ್ಟಡದ ಕೊರತೆಯಿಂದಾಗಿ ಸರ್ಕಾರಿ ಕಾಲೇಜು ಮರದ ಕೆಳಗೆ ಪಾಠ ಪ್ರವಚನಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸರ್ಕಾರಿ ಕಾಲೇಜಿನ ಕಟ್ಟಡ ಕಟ್ಟಲು ಅಂದಾಜು ತಯಾರಿಸಲಾಗಿದೆಯೇ ಹಾಗೂ ಅದರ ಅಂದಾಜು ಎಷ್ಟು?

ಈ) 1995-96ನೇ ಸಾಲಿನಲ್ಲಿ 1/3 ಭಾಗ ಹಣವನ್ನು ಕಟ್ಟಡಕ್ಕೆ ಬಿಡುಗಡೆ ಮಾಡಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :-

ಅ) -- ಬಂದಿದೆ --

ಆ) -- ಬಂದಿಲ್ಲ --

ಇ) ಅಂದಾಜು ಇನ್ನೂ ತಯಾರಿಸಿಲ್ಲದ ಕಾರಣ ಅಂದಾಜು ಎಷ್ಟು ಎಂದು ಹೇಳಲು ಬರುವುದಿಲ್ಲ.

ಈ) 1995-96ನೇ ಸಾಲಿನಲ್ಲಿ ಆಯವ್ಯಯದ ಕೊರತೆಯಿಂದಾಗಿ ಹೊಸ ಕಾಮಗಾರಿಗಳಿಗೂ ಆಯವ್ಯಯ ಒದಗಿಸಲು ಸಾಧ್ಯವಾಗಿರುವುದಿಲ್ಲ.

ವಿಷಯ:- ಹುಳಿಯಾರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಎಕ್ಸ್‌ರೇ ಘಟಕದ ಮಂಜೂರಾತಿ.